ದಿನಾಂಕಃ 04-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ವಾದಿ ರವರ ಪರ ವಕೀಲರಿಂದ,

6) ನಾನು 4 ನೇ ತರಗತಿಯವರೆ ವ್ಯಾಸಂಗ ಮಾಡಿರುತ್ತೇನೆ. ನನಗೆ ಓದಲು ಬರೆಯಲು ಬರುತ್ತದೆ. ನನ್ನ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ ಒಟ್ಟು ಎಷ್ಟು ಆಸ್ತಿ ಇತ್ತು ಎಂದು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ದನ ಮತ್ತು ಕರುಗಳ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಅನಾರೋಗ್ಯವಾಗಿದ್ದು, ಮೈಸೂರಿನ ಅಪೋಲೋ ಆಸ್ಪತ್ರೆಗೆ ದಾಖಲೆ ಮಾಡಿದ್ದರು. ನನ್ನ ತಂದೆಯ ಆರೋಗ್ಯದ ಚಿಕಿತ್ಸೆಗಾಗಿ ಎಷ್ಟು ಖರ್ಚಾಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ.

7) ನನ್ನ ತಂದೆ ಜೀವಂತ ಅವಧಿಯಲ್ಲಿ ಮನೆಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿ ಹೆಸರಿಗೆ ಪಾವತಿ ವಾರಸು ಮೂಲಕ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿ 10 ತರಗತಿಯವರೆಗೆ ವ್ಯಾಸಂಗ ಮಾಡಿರುತ್ತಾರೆ ನನ್ನ ಇತರೇ ಸಹೋದರ - ಸೋದರಿಯವರ ವಿದ್ಯಾಭ್ಯಾಸದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಅನೀಪ್ ಕುಮಾರ ರವರ ಪತ್ನಿ ಗ್ರಾಮ ಪಂಚಾಯತಿ ಸದಸ್ಯರಾಗಿರುತ್ತಾರೆ ಎಂದರೆ ಸರಿ. ಪಂಚಾಯತಿ ಚುನಾವಣೆಗೆ ಸುಮಾರು 5 ರಿಂದ 6 ಲಕ್ಷ ಹಣ ಖರ್ಚಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಬಾಡಿಗೆ ಮನೆಯಲ್ಲಿ ವಾಸವಾಗಿರುತ್ತೇನೆ. ನಿಪಿ-14 ರಲ್ಲಿ ಇರುವ ಮನೆಯಲ್ಲಿ ದೊಡ್ಡಮ್ಮ ಮತ್ತು ದೊಡ್ಡಪ್ಪ ವಾಸವಾಗಿರುತ್ತಾರೆ. ನಿಪಿ-14 ರ ಭಾವಚಿತ್ರ ಇರುವ ಮನೆಯಲ್ಲಿ ನನ್ನ ಮಾವ ವಾಸವಾಗಿರುತ್ತಾರೆ. ನಿಪಿ-14-15 ರಲ್ಲಿ ಭಾಚಿತ್ರದಲ್ಲಿ ಕಂಡು ಬರುವ 2010-11 ನೇ ಸಾಲಿನಲ್ಲಿ ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

8) ದಾವಾ ಸ್ವತ್ತಿನಲ್ಲಿ 1 ನೇ ವಾದಿ ಸ್ವಾಧೀನ ಇರುತ್ತಾರೆ. ಸದರಿ ದಾವೆಯಲ್ಲಿ ದಾವಾ ಸ್ವತ್ತುಗಳನ್ನು ಮಾರಟ ಮಾಡಬಾರದೆಂದು ಆದೇಶ ಆಗಿರುತ್ತದೆ ಎಂದರೆ ಸರಿ.

ನಿಪಿ–13 ರಂತೆ  ನನ್ನ ತಾಯಿ ಹಕ್ಕುಬಿಡುಗಡೆ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮದುವೆ ಸಮಾರು 20 ವರ್ಷಗಳ ಹಿಂದೆ ಆಗಿದೆ. ನನ್ನ ಮದುವೆ ಆದ ನಂತರ ಇತರೇ ಸಹೋದರ ಮತ್ತು ಸಹೋದರಿಯರ ಮದುವೆ ಆಗಿರುತ್ತದೆ. ಸದರಿ ಮದುವೆಗಳಿಗೆ ಎಷ್ಟು ಖರ್ಚು ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ತಾಯಿ ಕುಟುಂಬದ ಪೋಷಣೆಗಾಗಿ ಸಾಲ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಾಲಗಳನ್ನು ತೀರಿಸುವ ಸಲುವಾಗಿ ದಾವಾ ಸ್ವತ್ತನ್ನು ಮಾರಾಟ ಮಾಡುವ ಸಂಬಂಧವಾಗಿ ನಮ್ಮ ಮನೆಯಲ್ಲಿ ಮಾತುಕತೆ ಆಗಿರುತ್ತದೆ ಎಂದರೆ ಸರಿಯಲ್ಲ.  ಕರಾರು ಪತ್ರ ಆಗುವ ದಿನ ನಮ್ಮ ಸಂಬಂಧಿಕರು ತೀರಿಕೊಂಡಿದ್ದು, ನಾನು ಅಂತ್ಯಕ್ರಿಯೆಗೆ  ಹೋಗಿದ್ದು, ನಾನು ಮತ್ತು ಇತರೇ ಪ್ರತಿವಾದಿಗಳು ದೂರವಾಣಿ ಮೂಲಕ ಕರೆ ಮಾಡಿ  ಕ್ರಯ ಪತ್ರಕ್ಕೆ ಆಗುವ ಕಾಲಕ್ಕೆ ಸಹಿ ಮಾಡಿತ್ತೇವೆ ಎಂದು ತಿಳಿಸಿರುತ್ತೇವೆ ಎಂದರೆ ಸರಿಯಲ್ಲ.

10) ನಾನು ನಮ್ಮ ಕುಟುಂಬದ ಸ್ವತ್ತುಗಳಲ್ಲಿ ಸ್ವಾಧೀನ ಇರುವುದಿಲ್ಲ.  ನನ್ನ ಇತರೇ ಸಹೋದರ ಮತ್ತು ಸಹೋದರಿಯವರು ಜಂಟಿ ಸ್ವಾಧೀನದಲ್ಲಿ ಇರುತ್ತಾರೆ. ನನ್ನ ತಾಯಿ 4 ನೇ ಪ್ರತಿವಾದಿ ಜೊತೆಯಲ್ಲಿ ವಾಸವಾಗಿರುತ್ತಾರೆ. ನನ್ನ ತಾಯಿ ನನ್ನ ಪರವಾಗಿ ಹಕ್ಕು ಬಿಡುಗಡೆ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.  ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ